



ಹೆಂಡತಿ: ಏನ್ರೀ ಇದೂ ಮಳೆಯಲ್ಲಿ ಈ ಪಾಟಿ ನೆನೆದುಕೊಂಡು ಬಂದಿದ್ದೀರಿ! ಯಾಕೆ?

ಗುಂಡ: ಏನು ಮಾಡಲಿ ಇದ್ದಕ್ಕಿದ್ದ ಹಾಗೆ ಮಳೆ ಬಂದುಬಿಡ್ತು ಕಣೆ!

ಹೆಂಡತಿ: ಹೋಗಲಿ ಬಿಡಿ! ಅದೇನು ಚೀಲದೊಳಗೆ?

ಗುಂಡ: ಹೊಸಾ ರೈನ್‌ಕೋಟು.

★★★

ವೈದ್ಯ: ರೀ ಕಾಂಪೌಂಡರ್ ನಾಳೆ ಬೆಳಿಗ್ಗೆ ಬೇಗ ಬಂದು ಮಾಮೂಲಿಗಿಂತ ಹೆಚ್ಚಿಗೆ ಔಷಧಿಗಳನ್ನು ರೆಡಿ ಮಾಡಿಡಿ.

ಕಾಂಪೌಂಡರ್: ಯಾಕೆ ಸಾರ್?

ವೈದ್ಯ: ಇವತ್ತು ಪಕ್ಕದ ಮನೆ ಜಾಗೀರದಾರರ ಮನೆಯಲ್ಲಿ ನರಸಿಂಹ ಜಯಂತಿ ಕಾರ್ಯಕ್ರಮ ಇದೆ. ಅನ್ನ ಸಂತರ್ಪಣೆ ಜೋರಾಗಿ ಇರುತ್ತೆ. ಅದಕ್ಕೆ.

★★★

ಸರ್ದಾರ್ಜಿ: (ಫೋನಿನಲ್ಲಿ) ನಮಸ್ಕಾರ ಸಾರ್! ನನ್ನ ಕಾರಿನ ಸ್ಟೀರಿಯೋ, ಹಾರನ್, ಸ್ಟೀರಿಂಗ್, ಬ್ರೇಕ್, ಆಕ್ಸಿಲೇಟರ್ ಎಲ್ಲಾ ಕಳುವಾಗಿದೆ.

ಪೊಲೀಸ್: ಅರ್ಧಗಂಟೇಲಿ ಬರುತ್ತೇನೆ ಇರಿ

ಸರ್ದಾರ್ಜಿ: (ಮತ್ತೆ ) ಸಾರ್ ನೀವು ಬರುವುದು ಬೇಡ! ನನ್ನ ಕಾರಿನಲ್ಲಿ ಏನೂ ಕಳುವಾಗಿಲ್ಲ. ನಾನು ಕಾರಿನ ಹಿಂದಿನ ಸೀಟಿನಲ್ಲಿ ಕುಳಿತಿದ್ದೆ.

**(ಸಂಗ್ರಹ) ಎಂ.ಕೆ. ಮಂಜುನಾಥ್, ಬೆಂಗಳೂರು**

ಹೆಂಡತಿ: ರೀ... ಇವತ್ತು ನಮ್ಮ ಮದುವೆ ವಾರ್ಷಿಕೋತ್ಸವ ನಿಮಗೇನು ಗಿಫ್ಟ್ ಕೊಡಲಿ?

ನಂಜ: ಗಿಫ್ಟ್ ಏನೂ ಬೇಡ, ನೀನು ಯಾವಾಗಲೂ ನನ್ನನ್ನ ಪ್ರೀತಿ ಗೌರವದಿಂದ ನೋಡ್ಕೊಂಡ್ರೆ ಅಷ್ಟೇ ಸಾಕು.

ಹೆಂಡತಿ: ಅವೆಲ್ಲ ಆಗಲ್ಲ, ನಾನು ಗಿಫ್ಟೇ ಕೊಡಬೇಕು!

★★★



ನೀರಜ್: ಅಮ್ಮಾ ನಾನು ಅಮೆರಿಕಾಕ್ಕೆ ಹೋಗೋಣ ಅಂತ ಯೋಚನೆ ಮಾಡ್ತಾ ಇದೀನಿ.

ಅಮ್ಮ: ತುಂಬ ಒಳ್ಳೇದು. ಆದರೆ ತುಂಬಾ ಹಣ ಖರ್ಚಾಗುತ್ತಲ್ಲೋ.

ನೀರಜ್: ಅಯ್ಯೊ ಅಮ್ಮಾ, ಹಣ ಹೇಗೆ ಖರ್ಚಾಗುತ್ತೆ? ನಾನು ಸುಮ್ನೆ ಯೋಚನೆ ಮಾಡ್ತಾ ಇದೀನಿ ಅಷ್ಟೇ!

**(ಸಂಗ್ರಹ) ಹೇಮಂತ ಕುಮಾರ್, ಬೆಂಗಳೂರು**

ರಾಮರಾಯರು ಕಚೇರಿಯಿಂದ ಮನೆಗೆ ಮರಳುತ್ತಿದ್ದರು. ರಸ್ತೆಯಲ್ಲಿ ವೃದ್ಧ ಭಿಕ್ಷೆ ಬೇಡುತ್ತಿದ್ದ. 'ಬೆಳೆಗ್ಗೆಯಿಂದ ಏನೂ ತಿಂದಿಲ್ಲ, ಏನಾದ್ರು ಕೊಡಿ.'

ರಾಮರಾಯರು ಕರಗಿ ತಮ್ಮ ಮಗನಿಗೆ ತೆಗೆದುಕೊಂಡು ಹೋಗುತ್ತಿದ್ದ ಚಿಪ್ಸ್ ಪ್ಯಾಕೇಟನ್ನು ಬ್ಯಾಗಿನಿಂದ ತೆಗೆದು ಅವನಿಗೆ ಕೊಟ್ಟು ಮುಂದಕ್ಕೆ ಹೋದರು. ಆಗ ಮತ್ತೆ ಭಿಕ್ಷುಕ ಅವರನ್ನು ಕರೆದ. ರಾಮರಾಯರು ಅವನ ಬಳಿಗೆ ಬಂದರು. ಭಿಕ್ಷುಕ ತನ್ನ ಬನಿಯನ್ ಒಳಗಿನಿಂದ ರೂ.150 ತೆಗೆದುಕೊಟ್ಟು 'ಸ್ವಾಮಿ, ನನಗೆ ಮೇಲೇಳಲು ಆಗುತ್ತಿಲ್ಲ. ನೀವು ತುಂಬಾ ಪ್ರೀತಿಯಿಂದ ಚಿಪ್ಸ್ ಕೊಟ್ಟಿರಿ. ಈಗ ನನ್ನ ಮೂಡ್ ಬದಲಾಗಿದೆ. ದಯವಿಟ್ಟು ಎದುರಿನ ರಸ್ತೆಯ ಮೂರನೇ ಅಂಗಡಿಯ ವೈನ್ ಶಾಪ್‌ನಿಂದ ನನಗೊಂದು ಕ್ವಾರ್ಟರ್ ತಂದು ಕೊಡಿ, ದೇವರು ಒಳಿತನ್ನು ಮಾಡ್ತಾನೆ!' ಎಂದ.

★★★

ನಾಟಕದ ಕಲಾವಿದ ತನ್ನ ಆತ್ಮೀಯ ಮಿತ್ರನಿಗೆ ಹೇಳುತ್ತಿದ್ದ. 'ನಿನ್ನೆಯ ನಾಟಕದಲ್ಲಿ ನಾನು ಸಾಯುವ ದೃಶ್ಯವಿತ್ತು. ನನ್ನ ಅಭಿನಯ ನೋಡಿದ ಪ್ರೇಕ್ಷಕರು. ನಾನು ನಿಜವಾಗಿಯೂ ಸತ್ತೆನೆಂದು ತಿಳಿದರು. ಒಬ್ಬ ಪ್ರಜ್ಞೆ ತಪ್ಪಿದ್ದ'

ಯಾರವನು?

ನನ್ನ ಮನೆ ಮಾಲೀಕ. ಅವನಿಗೆ ನಾನು 60 ಸಾವಿರ ಬಾಕಿ ಕೊಡಬೇಕು.

★★★

ಸುನೀಲ್ ಮತ್ತು ಅನಿಲ್ ಇಬ್ಬರೂ ಕ್ಲಬ್‌ನಲ್ಲಿ ಸ್ವಲ್ಪ ಹೆಚ್ಚೇ ಕುಡಿದರು. ಅವರು ಕ್ಲಬ್‌ನಿಂದ ನಡುರಾತ್ರಿಗೆ ಕಾರಿನಲ್ಲಿ ಮನೆಗೆ ಹೊರಟರು. ಕೆಲವೇ ಕ್ಷಣಗಳಲ್ಲಿ ಕಾರು ಅತಿವೇಗದಿಂದ ಚಲಿಸಿತು. ಇಬ್ಬರೂ ತೊದಲುತ್ತಾ ಮಾತನಾಡುತ್ತಿದ್ದರು. ಸುನೀಲ ಪದೇ ಪದೇ ಹೇಳುತ್ತಿದ್ದ.

ಕಾರನ್ನು ನಿಧಾನವಾಗಿ ಬಿಡು, ಎಲ್ಲಾದರೂ ಆಕ್ಸಿಡೆಂಟ್ ಆದೀತು.

ಕಾರು ಮತ್ತೂ ವೇಗವಾಗಿ ಚಲಿಸಿ, ಒಂದು ದೊಡ್ಡ ಮರಕ್ಕೆ ಡಿಕ್ಕಿಹೊಡೆಯಿತು. ಇಬ್ಬರೂ ಪ್ರಜ್ಞೆ ಕಳೆದುಕೊಂಡರು.

ಬೆಳಿಗ್ಗೆ ಪ್ರಜ್ಞೆ ಬಂದಾಗ ಇಬ್ಬರೂ ಆಸ್ಪತ್ರೆಯ ಕೋಣೆಯಲ್ಲಿ ಅಕ್ಕಪಕ್ಕ ಮಲಗಿದ್ದರು. ಸುನೀಲ ನರಳುತ್ತಾ ಹೇಳಿದ, ನಾನು ನಿನಗೆ ಪದೇ ಪದೇ ನಿಧಾನ ಹೋಗು, ನಿಧಾನ ಹೋಗು ಅಂತ ಹೇಳ್ತಿದ್ದೆ. ನೀನು ನನ್ನ ಮಾತನ್ನು ಕೇಳಲೇ ಇಲ್ಲ.

'ಸುನೀಲ, ಕಾರು ಬಿಡುತ್ತಿದ್ದವನು ನೀನೇ ಎಂದ' ಅನಿಲ.

**(ಸಂಗ್ರಹ) ಡಿ.ಎನ್. ಶ್ರೀನಾಥ್, ಶಿವಮೊಗ್ಗ**



**ನಂ.1 ವಶೀಕರಣ ಮಾಂತ್ರಿಕರು ವೇದಬ್ರಹ್ಮ ಪಂಡಿತ್ ಶಿವಶಂಕರ್‌ರಾವ್ ಗುರೂಜೀ**

ನಿಮ್ಮ ಸಮಸ್ಯೆ ಯಾವುದೇ ಇದ್ದರೂ ಅಖಂಡ ಬಲಿಷ್ಠ ಸ್ತಂಭನ ಮದನ ಯಕ್ಷಿಣಿ ಕರ್ಣ ಪಿಶಾಚಿ ಮಹಾಮಾಯ ಕೇರಳ ಭಗವತಿದೇವಿ ಪೂಜೆಯಿಂದ ಕೆಲವೇ ದಿನಗಳಲ್ಲಿ ಶಾಶ್ವತ ಪರಿಹಾರ.

ಮದುವೆ, ಸಂತಾನ, ಪ್ರೀತಿಯಲ್ಲಿ ನಂಬಿ ಮೋಸ, ಎಷ್ಟೇ ಸಂಪತ್ತಿದ್ದರೂ ಪುನಃ ಶಾಂತಿಯ ಕೊರತೆ
ಪರಸ್ತ್ರೀ ವ್ಯಾಮೋಹದಿಂದ ಮುಕ್ತಿ, ಮಕ್ಕಳ ದುರಭ್ಯಾಸ, ಆರೋಗ್ಯ, ಶತ್ರುನಾಶ ಇತ್ಯಾದಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರ.

**ಸ್ತ್ರೀ ಪುರುಷ ವಶೀಕರಣಕ್ಕೆ ಮದನ ಸಮ್ಮೋಹಿನಯಂತ್ರ ಮಾಡಿಕೊಡಲಾಗುದು**

**ವಶೀಕರಣ ಪ್ರಯೋಗಗಳನ್ನು ತೆಗೆಯಲಾಗುವ ಏಕೈಕ ಜ್ಯೋತಿಷ್ಯರು**

ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದವರಿಗೆ –ಏಕೈಕ ಪರಿಹಾರ ಮಾರ್ಗ, ಅಸಾಧ್ಯವಾದದ್ದು ನಮ್ಮಲ್ಲಿ ಗ್ಯಾರಂಟಿ ಪರಿಹಾರ, ನಿಮ್ಮ ಎಲ್ಲಾ ವಿಷಯಗಳು ಗುಪ್ತವಾಗಿಡುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳು ಹಿಂಜರಯಬೇಕಾಗಿಲ್ಲ.

**ವಿಶೇಷ ಸೂಚನೆ ಸಮಸ್ಯೆ ಏನೇ ಇರಲಿ 7 ದಿನದಲ್ಲಿ 100% ಪರಿಹಾರ**

**7090095678** ಪತ್ರ ಹಾಗೂ ಪೋನ್ ಮೂಲಕ ಸಂಪರ್ಕಿಸಿ ಮಂಗಳೂರಿನಲ್ಲಿಯೂ ಲಭ್ಯವಿರುತ್ತಾರೆ.